## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1139

ಸದಸ್ಯರ ಹೆಸರು : ಶ್ರೀ ಡಿ.ಟಿ.ಶ್ರೀನಿವಾಸ್

ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸುವ ದಿನಾಂಕ : 18.12.2024.

| ಕ್ರ. ಸಂ. | ಪ್ರಶ್ನೆ | ಉತ್ತರ |
| --- | --- | --- |
| ಅ. | ಹಿರಿಯೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಸಾರಿಗೆ ಘಟಕ ಕಾಮಗಾರಿ ಮಂಜೂರಾಗಿದೆಯೇ ; ಈ ಕಾಮಗಾರಿಗೆ ಮಂಜೂರಾದ ಅನುದಾನ ಎಷ್ಟು ; | ಹಿರಿಯೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಸಾರಿಗೆ ಘಟಕ ಮಂಜೂರಾಗಿದೆ. ಈ ಕಾಮಗಾರಿಗೆ ಮಂಜೂರಾದ ಅನುದಾನ ರೂ.600.00 ಲಕ್ಷಗಳು ಮತ್ತು ಇದುವರೆಗೂ ಖರ್ಚಾದ ಅನುದಾನ ರೂ.594.00 ಲಕ್ಷಗಳು. |
| ಆ. | ಕಾಮಗಾರಿಗೆ ಖರ್ಚಾದ ಅನುದಾನ ಎಷ್ಟು ; ಕಾಮಗಾರಿ ಯಾವ ಹಂತದಲ್ಲಿದೆ ; | ಸದರಿ ಘಟಕ ನಿರ್ಮಾಣ ಕಾಮಗಾರಿಯು ಪೂರ್ಣಗೊಂಡಿದ್ದು, ಅಂತಿಮ ಹಂತದ ಕೆಲಸಗಳು ಹಾಗೂ ಡೀಸೆಲ್ ಟ್ಯಾಂಕ್ ಗೆ ಸಂಬಂಧಿಸಿದ ಡೆಪ್ಯೂಟಿ ಕಂಟ್ರೋಲರ್ ಆಫ್ ಎಕ್ಸ್ಪ್ಲೋಸಿವ್ ಚೆನ್ನೈ ಇವರಿಂದ ಪರವಾನಗಿ ಪಡೆಯುವ ಪ್ರಕ್ರಿಯೆ ಪ್ರಗತಿಯಲ್ಲಿದೆ. |
| ಇ. | ಕಾಮಗಾರಿ ಯಾವಾಗ ಪೂರ್ಣಗೊಳ್ಳುವುದು ; ಪೂರ್ಣಗೊಂಡಿದ್ದಲ್ಲಿ ಸರ್ಕಾರದಿಂದ ಲೋಕಾರ್ಪಣೆಯಾಗಿದೆಯೇ ; ಇಲ್ಲವಾದಲ್ಲಿ ಕಾರಣಗಳೇನು ? | ಡೀಸೆಲ್ ಟ್ಯಾಂಕ್ ಗೆ ಸಂಬಂಧಪಟ್ಟ ಪರವಾನಗಿಯನ್ನು ಡಿಸೆಂಬರ್-2024ರ ಅಂತ್ಯದೊಳಗೆ ಪಡೆಯುವ ನಿರೀಕ್ಷೆಯಿದ್ದು, ಅದರಂತೆ, ಕಾಮಗಾರಿಯನ್ನು ಡಿಸೆಂಬರ್ -2024ರ ಅಂತ್ಯಕ್ಕೆ ಪೂರ್ಣಗೊಳಿಸಲಾಗುವುದು.<br><br>ಕಾಮಗಾರಿ ಪೂರ್ಣಗೊಂಡ ನಂತರ ಆದ್ಯತೆಯ ಮೇರೆಗೆ ಶಿಷ್ಟಾಚಾರದನ್ವಯ ಘಟಕವನ್ನು ಲೋಕಾರ್ಪಣೆ ಮಾಡಲು ಕ್ರಮ ಕೈಗೊಳ್ಳಲಾಗುವುದು. |

ಸಂಖ್ಯೆ: ಟಿಡಿ 243 ಟಿಸಿಕ್ಯೂ 2024

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು